ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ:https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ: ಕವಿಪ್ರನಿನಿ/ಎಸ್‌ಎ3/1598/2006-07** **ದಿನಾಂಕ:** 16 SEP 2021

## ಸುತ್ತೋಲೆ

**ವಿಷಯ:** ಕವಿಪ್ರನಿನಿಯಿಂದ ಅನ್ಯ ಇಲಾಖೆ/ಸಂಸ್ಥೆಗಳಲ್ಲಿ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ನೀಡಿದ ಸೂಚನೆಗಳ ಬಗ್ಗೆ.

**ಉಲ್ಲೇಖ:** 1. ನಿಗಮದ ಸುತ್ತೋಲೆ ಸಂಖ್ಯೆ; ಕವಿಪ್ರನಿನಿ/ಎಸ್‌ಎ3/1598/2006-07 ದಿನಾಂಕ;15.09.2021.
2. ನಿಗಮದ ಆದೇಶ ಸಂಖ್ಯೆ; ಕವಿಪ್ರನಿನಿ/ಎಸ್‌ಎ3/1598/2006-07 ದಿನಾಂಕ;05.04.2014.

--------

ಸರ್ಕಾರದ ವಿವಿಧ ಇಲಾಖೆಗಳಿಗೆ/ನಿಗಮ/ಮಂಡಳಿ/ಇತರೆ ಸಂಸ್ಥೆಗಳಿಗೆ ಅವಶ್ಯಕತೆಯ ಮೇರೆಗೆ ಮತ್ತು ಕವಿಪ್ರನಿನಿಯ ಸಿಬ್ಬಂದಿಯ ಕೋರಿಕೆಯ ಮೇರೆಗೆ, ಕವಿಪ್ರನಿನಿ ಸಿಬ್ಬಂದಿ ಸೇವೆಯನ್ನು ನಿಯೋಜನೆಯ ಮೇರೆಗೆ ನೀಡಲಾಗುತ್ತಿದೆ. ಕವಿಪ್ರನಿನಿಯಿಂದ ನಿಯೋಜನೆಯ ಮೇರೆಗೆ ತೆರಳುವ ಸಿಬ್ಬಂದಿಗಳಿಗೆ ಅನ್ವಯಿಸುವ ಷರತ್ತುಗಳನ್ನು ಉಲ್ಲೇಖಿತ ನಿಗಮದ ಆದೇಶ ದಿನಾಂಕ; 05.04.2014 ರಲ್ಲಿ ವಿಧಿಸಲಾಗಿದೆ.

ಆದರೆ, ಇತ್ತೀಚಿನ ದಿನಗಳಲ್ಲಿ ನಿಯೋಜಿತ ಸಿಬ್ಬಂದಿಯು ನಿಯೋಜನಾ ಅವಧಿಯ ಮುಕ್ತಾಯದ ನಂತರವೂ ಸಹ, ನಿಗಮದಿಂದ ನಿಯೋಜನಾ ವಿಸ್ತರಣೆ ಆದೇಶವಿಲ್ಲದೆಯೇ ಅನ್ಯ ಇಲಾಖೆ/ಸಂಸ್ಥೆಗಳಲ್ಲಿ ಮುಂದುವರೆಯುತ್ತಿರುವುದು ಮತ್ತು ನಿಯೋಜಿತ ಸಿಬ್ಬಂದಿಯ ಪಿಂಚಣಿ ಮತ್ತು ಉಪದಾನ ವಂತಿಗೆಗಳು ನಿಗದಿತ ಅವಧಿಯೊಳಗೆ ಕವಿಪ್ರನಿನಿಗೆ ಸಂದಾಯವಾಗದ ಪ್ರಕರಣಗಳು ಹೆಚ್ಚಾಗುತ್ತಿರುತ್ತವೆ. ಇದರಿಂದಾಗಿ, ಸಿಬ್ಬಂದಿಯ ನಿಯೋಜನಾ ಅವಧಿಯ ವಿಸ್ತರಣೆ, ವಾರ್ಷಿಕ ವೇತನ ಬಡ್ತಿಗಳ ಬಿಡುಗಡೆ, ಸಿಬ್ಬಂದಿಯ ನಿವೃತ್ತಿ ಸೌಲಭ್ಯಗಳನ್ನು ಇತ್ಯರ್ಥಪಡಿಸಲು ಅಡಚಣೆಯಾಗುವುದರ ಜೊತೆಗೆ, ಕವಿಪ್ರನಿನಿಗೆ ಅವಶ್ಯವಿರುವ ಮಾನವ ಸಂಪನ್ಮೂಲದ ಅಲಭ್ಯತೆ ಉಂಟಾಗುತ್ತಿರುತ್ತವೆ.

ಈ ಹಿನ್ನೆಲೆಯಲ್ಲಿ ನಿಗಮದ ಆದೇಶ ಸಂಖ್ಯೆ; ಕವಿಪ್ರನಿನಿ/ಎಸ್‌ಎ3/1598/2006-07 ದಿನಾಂಕ; 05.04.2014ರಲ್ಲಿ ಈಗಾಗಲೇ ವಿಧಿಸಲಾಗಿರುವ ಷರತ್ತುಗಳನ್ನು ಮತ್ತು ಈ ಕೆಳಕಂಡ ಸೂಚನೆಗಳನ್ನು ನಿಯೋಜಿತ ಸಿಬ್ಬಂದಿಯು ತಪ್ಪದೇ ಪರಿಪಾಲಿಸಲು ಸೂಚಿಸಿದೆ:-

1. ಕವಿಪ್ರನಿನಿಯ ನಿಯೋಜಿತ ಸಿಬ್ಬಂದಿಯು ನಿಯೋಜನಾ ಅವಧಿಯು ಮುಕ್ತಾಯಗೊಂಡ ದಿನಾಂಕದಂದು ನಿಗಮದಿಂದ ನಿಯೋಜನಾ ವಿಸ್ತರಣೆ ಆದೇಶವಿರದ ಸಂದರ್ಭದಲ್ಲಿ, ಅನ್ಯ ಇಲಾಖೆ/ಸಂಸ್ಥೆಯಿಂದ ತಪ್ಪದೇ ಕಾರ್ಯಮುಕ್ತಿ ಹೊಂದಿ ತಕ್ಷಣವೇ ಕವಿಪ್ರನಿನಿ ನಿಗಮ ಕಾರ್ಯಾಲಯದಲ್ಲಿ ಸ್ಥಳನಿಯುಕ್ತಿಗಾಗಿ ವರದಿ ಮಾಡಿಕೊಳ್ಳಲು ಸೂಚಿಸಿದೆ.
2. ಕವಿಪ್ರನಿನಿಯ ನಿಯೋಜಿತ ಸಿಬ್ಬಂದಿಯು ನಿಯೋಜಿಸಲ್ಪಟ್ಟ ಇಲಾಖೆ/ಸಂಸ್ಥೆಯಿಂದ ಸಕಾಲದಲ್ಲಿ ಪಿಂಚಣಿ ಮತ್ತು ಉಪದಾನ ವಂತಿಗೆಗಳು ಕವಿಪ್ರನಿನಿಗೆ ಸಂದಾಯವಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ, ನಿಯೋಜಿತ ಸಿಬ್ಬಂದಿಯನ್ನು ನಿಯೋಜನೆಯಿಂದ ತಕ್ಷಣವೇ ಹಿಂಪಡೆಯಲಾಗುವುದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ**

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.

2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ)/ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
4. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ.) ರವರ ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
5. ವ್ಯವಸ್ಥಾಪಕರು(ಸಿಬ್ಬಂದಿ-2), ನಿಗಮ ಕಾರ್ಯಾಲಯ, ಕವಿಪ್ರನಿನಿ ರವರು- **ಅನ್ಯ ಇಲಾಖೆ/ಸಂಸ್ಥೆಗಳಲ್ಲಿ ನಿಯೋಜನೆಯಲ್ಲಿರುವ ಎಲ್ಲಾ ಅಧಿಕಾರಿಗಳು/ನೌಕರರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು**.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. / ಎಸ್ಕಾಂ ಪ.ಜಾ. /ಪ. ಪಂ. ಅಧಿಕಾರಿಗಳ ಸಂಘ, ಬೆಂಗಳೂರು.